# ಆಹಾ ಸುದ್ದಿ!

★ ಸಸಿತೋಟ

ನ್ಯೂಜಿಲೆಂಡ್‌ನ ಕ್ರಿಕೆಟ್ ಕಮೆಂಟೇಟರ್ ಮೈಕ್ ಲೇನ್ ಎಂಬಾತನಿಗೆ ಈ ಕ್ರೀಡೆಯ ಮೇಲೆ ಅದೇನು ಪ್ರೇಮವೋ ಅಥವಾ ತನ್ನ ವೃತ್ತಿಯ ಮೇಲೆ ಅದೇನು ಪ್ರೀತಿಯೋ ಗೊತ್ತಿಲ್ಲ. ವೈದ್ಯರು ಆತನಿಗೆ ವಾಸೆಕ್ಟಮಿ (ಸಂತಾನಹರಣ ಶಸ್ತ್ರಚಿಕಿತ್ಸೆ) ಮಾಡುವ ಸಂದರ್ಭದಲ್ಲೂ ಒಂದು ಕೈಯಲ್ಲಿ ಹಿಡಿದ ಮೊಬೈಲ್‌ನಲ್ಲಿ ಪಂದ್ಯವನ್ನು ನೋಡುತ್ತ, ಇನ್ನೊಂದು ಕೈಯಲ್ಲಿ ಇದ್ದ ಮೊಬೈಲ್ ಅನ್ನು ಬಾಯಿಗೆ ಒತ್ತಿ ಹಿಡಿದು ಫೇಸ್‌ಬುಕ್‌ನಲ್ಲಿ ಕಮೆಂಟ್ರಿ ಕೊಟ್ಟನಂತೆ. ಈ ವಿಡಿಯೋ ವೈರಲ್ ಆಗಿದ್ದು, ಮಧ್ಯೆ ಮಧ್ಯೆ ನರಳಾಟದ ಸಂಗೀತ ಸೇರಿಸಲಾಗಿದೆಯಂತೆ.



ಜಪಾನಿನಲ್ಲಿ ಬೆನ್ನು ನೋವು, ಕುಳಿತುಕೊಳ್ಳುವ ಭಂಗಿಯನ್ನು ಸರಿಪಡಿಸಲು 'ಒಟೊನಮಕಿ' ಅಂದರೆ ದೊಡ್ಡವರನ್ನು ಬಟ್ಟೆಯಲ್ಲಿ ಸುತ್ತುವುದು ಎಂಬ ಚಿಕಿತ್ಸೆ ಜನಪ್ರಿಯವಾಗಿದೆಯಂತೆ. ಹೊಸ ಬಗೆಯ ಕಾಯಿಲೆಗಳು, ಚಿಕಿತ್ಸೆಯನ್ನು ಕಂಡು ಹಿಡಿಯುವ ಖಯಾಲಿಗಳು ಎಲ್ಲವೂ ಶತಾಯುಷಿಗಳ ನಾಡು ಜಪಾನಿನಲ್ಲೇ ಜಾಸ್ತಿಯಾಗಿರುವುದು ಸಹಜ ಬಿಡಿ.



ಗಿನ್ನೆಸ್ ದಾಖಲೆ ಮಾಡಿರುವ ನ್ಯೂಯಾರ್ಕ್‌ನ ಈ 'ಬಳುಕುವ ರಾಣಿ', ಶೆಮಿಕಾ ಚಾರ್ಲ್ಸ್ ಇತ್ತೀಚೆಗೆ ಇನ್ನೊಂದು ದಾಖಲೆ ಮಾಡಿದ್ದಾಳಂತೆ. ಕೈಯಲ್ಲಿ ಮದ್ಯದ ಗ್ಲಾಸ್ ಇರುವ ಟ್ರೇ ಹಿಡಿದುಕೊಂಡು ಟೊಯೊಟ ಸುವ್ ಕೆಳಗೆ ತನ್ನ ದೇಹವನ್ನು ತೂರಿ ಆಚೆ ಬಂದಿದ್ದಾಳೆ. ಒಂದೇ ಒಂದು ಹನಿ ಮದ್ಯ ಕೂಡಾ ಚೆಲ್ಲಲಿಲ್ಲವಂತೆ.

ಟೋಕಿಯೋದಲ್ಲಿರುವ ಈ 'ಬುಕ್ ಆ್ಯಂಡ್ ಬೆಡ್' ಹೋಟೆಲ್ ಅನ್ನು ಪುಸ್ತಕದಂಗಡಿ ಥೀಮ್ ಮೇಲೆ ನಿರ್ಮಿಸಲಾಗಿದೆಯಂತೆ. ಪುಸ್ತಕದ ರ್‍ಯಾಕ್‌ಗಳ ಮಧ್ಯೆ ರಚಿಸಿರುವ ಕೋಶದೊಳಗೆ ತಿನ್ನಿ, ಮಲಗಿ, ಓದಿ.. ಏನು ಬೇಕಾದರೂ ಮಾಡಿ. ಆದರೆ ಹೋಗುವಾಗ ಪುಸ್ತಕ ವಾಪಸ್ಸು ಕೊಟ್ಟು ಹೋಗಿ ಎಂದು ಫಲಕ ಹಾಕಲಾಗಿದೆಯಂತೆ. ಒಮ್ಮೆ ಬಳಸಿ ಬಿಸಾಕಿ ಎಂಬ ಥೀಮ್ ಇದ್ದರೆ ಒಳ್ಳೆಯದಿತ್ತು, ಬ್ಯಾಗಿನೊಳಗೆ ಎಸೆದುಕೊಂಡು ಹೋಗಬಹುದಿತ್ತು ಎಂದು ಭೇಟಿ ಕೊಟ್ಟವರು ಗೊಣಗಿಕೊಂಡಿರಬಹುದು.





ಅಮೆರಿಕದ ಈ ಕುಸ್ತಿಪಟು ಜಾನ್ ಫೆರಾರೊ ಎಂಬಾತನಿಗೆ ಮೊಳೆ ಹೊಡೆಯಲು ಸುತ್ತಿಗೆಯೇ ಬೇಡವಂತೆ. ತಲೆಯಿಂದಲೇ ಕೇವಲ ಎರಡೇ ನಿಮಿಷಗಳಲ್ಲಿ 40 ಮೊಳೆಗಳನ್ನು ಗೋಡೆಗೆ ಬಡಿದು ದಾಖಲೆ ಮಾಡಿದ್ದಾನಂತೆ. ಮೊಳೆಗಳ ಮೇಲೆ ಡಿಚ್ಚಿ ಪ್ರಯೋಗ ನೋಡಿದರೆ ಎದುರಾಳಿ ಕುಸ್ತಿಪಟುಗಳು ಈತನ ಡಿಚ್ಚಿ ರುಚಿಯನ್ನು ಉಂಡು ಕಾಲ್ತೆಗೆದಿರಬಹುದು ಎನಿಸುತ್ತದೆ.

ಸೋಮಾರಿ ಅಧಿಕಾರಿಗಳನ್ನು ಕೆಲಸ ಮಾಡುವಂತೆ ಹೇಗೆ ಪ್ರಚೋದಿಸಬೇಕು ಎಂದು ಚರ್ಚಿಸಲು ಚೀನಾದಲ್ಲಿ ನಡೆಸಿದ ಸಭೆಯೊಂದರಲ್ಲಿ ಹಿರಿಯ ಅಧಿಕಾರಿಗಳೇ ನಿದ್ರೆ ಹೊಡೆದರಂತೆ. ಈಗ ಕಾಯಮ್ಮಾಗಿ ನಿದ್ರೆ ಹೊಡೆಯಿರಿ ಎಂದು ಸರ್ಕಾರ ಅವರನ್ನು ಮನೆಗೆ ಕಳಿಸಿದೆಯಂತೆ. ಪಾಪ, ಕಚೇರಿಯಲ್ಲಿರುವಾಗ ಈ ರೀತಿ ನಿದ್ರಿಸಬೇಡಿ ಎಂದು ಡೆಮೊ ಕೊಡುತ್ತಿದ್ದವರಿಗೆ ಶಿಕ್ಷೆ ನೀಡಬಾರದಿತ್ತು.